2. ಒಂದು ಕಿ.ಮೀಟರ್ ರಸ್ತೆ ದುರಸ್ತಿಗೆ ಎಷ್ಟು ಹಣ ಒದಗಿಸಬೇಕೆಂದು ನಿಯಮವಿರುತ್ತದೆ?

3. ಮಲೆನಾಡು-ಬೈಲುಸೀಮೆ, ಹೈದರಾಬಾದ್ ಅಭಿವೃದ್ಧಿ ಮಂಡಳಿಗಳಿಂದ ಮತ್ತು ಸಂಸದರ ನಿಧಿಯಿಂದ ಅಭಿವೃದ್ಧಿಗೊಳಿಸಿದ ಟಾರು ರಸ್ತೆಗಳನ್ನು ಗುಂಡಿ ಮುಚ್ಚುವ ಮೂಲಕ ದುರಸ್ತಿ ಮಾಡುವುದು ಯಾರ ಜವಾಬ್ದಾರಿಯಾಗಿರುತ್ತದೆ? (ವಿವರ ನೀಡುವುದು)

ಉತ್ತರ

1. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ, ಬರುವ ವಿವಿಧ ವರ್ಗಗಳ ರಸ್ತೆಯ ಉದ್ದದ ಆಧಾರದ ಮೇಲೆ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ವಹಣಾ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

2. ಪ್ರತಿ ಕಿಲೋ ಮೀಟರ್‌ಗೆ ಈ ಕೆಳಗಿನಂತೆ ಅನುದಾನ ಒದಗಿಸಲು ನಿಯಮವಿರುತ್ತದೆ.

ಡಾಂಬರು ರಸ್ತೆಗೆ	ರೂ. 19200-00
ಜಲ್ಲಿರಸ್ತೆ (ಡಬ್ಲ್ಯೂಬಿಎಂ)	ರೂ. 13800-00
ಮಣ್ಣಿನ ರಸ್ತೆಗೆ (ಗ್ರಾವೆಲ್ ರಸ್ತೆ)	ರೂ. 9200-00

3. ಇವು ಜಿಲ್ಲಾ ಪಂಚಾಯತ್ ರಸ್ತೆಗಳಾಗಿದ್ದಲ್ಲಿ ಅವುಗಳ ನಿರ್ವಹಣೆ ಮಾಡುವುದು ಜಿಲ್ಲಾ ಪಂಚಾಯತ್ ಜವಾಬ್ದಾರಿಯಾಗಿರುತ್ತದೆ.

ಹೊಳೆಹೊನ್ನೂರು ಪ್ರಥಮ ದರ್ಜೆ ಕಾಲೇಜಿಗೆ ಕೊಠಡಿ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1126(1364)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಪ್ರಶ್ನೆ

ಅ. ಅಪೂರ್ಣಗೊಂಡ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಗ್ರಾಮವು ಗ್ರಾಮಾಂತರ ಪ್ರದೇಶವಾಗಿದ್ದು ಇಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಎರಡು ಕೊಠಡಿಗಳ ಕೊರತೆ ಇರುವುದು ಸರ್ಕಾರ ಮನಗಂಡಿದೆಯೇ?

ಆ. ಹಾಗಿದ್ದಲ್ಲಿ ಸದರಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ. ಹೌದು.

ಆ. ಹೌದು.

ಸಿ.ಇ.ಟಿ ಮೂಲಕ ಉಚಿತ ಸೀಟು ಪಡೆದ ವಿದ್ಯಾರ್ಥಿಗಳಿಂದ ಸುಲಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127(159)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

ಪ್ರಶ್ನೆ

1. 2001ನೇ ಸಾಲಿನಲ್ಲಿ ಸಿ.ಇ.ಟಿ.ಯಿಂದ ಎಷ್ಟು ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯದ ಉಚಿತ ಸೀಟುಗಳನ್ನು ನೀಡಲಾಗಿದೆ?

2. ಉಚಿತ ಸೀಟು ಪಡೆದುಕೊಂಡ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳಲ್ಲಿ ಅರ್ಜಿ ಶುಲ್ಕ, ನೋಂದಣಿ ಶುಲ್ಕ, ಲ್ಯಾಬ್ ಶುಲ್ಕ, ಆಸ್ಪತ್ರೆ ಶುಲ್ಕ, ಹಾಸ್ಟಲ್ ಡಿಪಾಸಿಟ್ ಎಂದು ಲಕ್ಷಾಂತರ ರೂ.ಗಳನ್ನು ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?